ಇಂದು ದಿನಾಂಕಃ 19.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ. ವಿ.ವಿ.ಎಮ್. ವಕೀಲರಿಂದಃ

1. ಹಿರೇಸಂಗಾಪುರ ಗ್ರಾಮದ ಗ್ರಾಮ ನಕ್ಷೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಹಿರೇ ಸಂಗಾಪುರ ಗ್ರಾಮದ ನಕ್ಷೆಯನ್ನು ಹಾಜರುಪಡಿಸಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ರ ಆಸ್ತಿಯು ಸರ್ವೇ ನಂಬರಃ 36 ಕ್ಕೆ ಹೊಂದಿಕೊಂಡು ಉತ್ತರ ದಿಕ್ಕಿಗೆ ಇದೆ. ಸದರಿ ಸರ್ವೇ ನಂಬರಃ 36 ರ ಉತ್ತರ ದಿಕ್ಕಿಗೆ ಸರ್ವೇ ನಂಬರಃ 49 ಇದೆ ಎಂದರೆ ಸರಿ. ಸರ್ವೇ ನಂಬರಃ 49 ರಲ್ಲಿ 5 ಹಿಸ್ಸೆ ಇವೆ, ಒಂದು ಹಿಸ್ಸೆ ದಂಡಗಿಹಳ್ಳಿ ಬಸವಣ್ಣ ದೇವರಿಗೆ, ಅದರ ಪಕ್ಕ ಉತ್ತರಕ್ಕೆ ನಮ್ಮ ಹೊಲ, ಪಕ್ಕಕ್ಕೆ ಮಂಜಪ್ಪ ದಾವಣಗೆರೆ, ಮಂಜಪ್ಪ ದಾವಣಗೆರೆರವರು ಶಾಂತಪ್ಪ ಬಸಪ್ಪ ಚಿಕ್ಕೋಳ ರವರಿಂದ ಖರೀದಿಸಿದ ಆಸ್ತಿ, ಪಕ್ಕಕ್ಕೆ ಕುಬೇರಪ್ಪ ಮಡಿವಾಳರ ಮತ್ತು ಬಸಪ್ಪ ಮಡಿವಾಳರ ಇವರ ಆಸ್ತಿ, ಸದರಿ ಕುಬೇರಪ್ಪ ಮಡಿವಾಳರ ಹಾಗೂ ಬಸಪ್ಪ ಮಡಿವಾಳರ ನಮ್ಮ ಊರಿನವರು.

2. ಸರ್ವೇ ನಂಬರಃ 49 ರ ಉತ್ತರಕ್ಕೆ ಹಿರೇ ಸಂಗಾಪುರ ಗ್ರಾಮದ ಸರ್ವೇ ನಂಬರಃ 47 ಮತ್ತು 48 ಇವೆ ಎಂದರೆ ಸರಿ. ಸದರಿ ಸರ್ವೇ ನಂಬರಃ 47 ಕರೇಗೌಡ ಬಸನಗೌಡ ಮುದಿಯಪ್ಪನವರ ಆಸ್ತಿ ಹಾಗೂ 48 ಆಸ್ತಿಯನ್ನು ಬಸಪ್ಪ ಹಾದ್ರಿಹಳ್ಳಿರವರು ಖರೀದಿಸಿರುತ್ತಾರೆ. ಸದರಿ ಬಸಪ್ಪ ಹಾದ್ರಿಹಳ್ಳಿರವರು ಹಾದ್ರಿಹಳ್ಳಿ ಗ್ರಾಮದವರು ಈಗ ನಮ್ಮೂರಿನಲ್ಲಿ ಇರುತ್ತಾರೆ. ಸುಮಾರು 40 ವರ್ಷಗಳಿಂದ ನಿಮ್ಮೂರಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸರ್ವೇ ನಂಬರಃ 40, 41, 62, 63 ರ ಆಸ್ತಿಗಳು ನಮ್ಮೂರಿನವರವು ಎಂದರೆ ಸಾಕ್ಷಿಯು ನಮ್ಮೂರು ಹಾಗೂ ದಂಡಗೀಹಳ್ಳಿ ಊರಿನವರವು ಇವೆ ಎಂದು ನುಡಿಯುತ್ತಾರೆ. ಸರ್ವೇ ನಂಬರಃ 36 ರ ದಕ್ಷಿಣಕ್ಕೆ ಹಳ್ಳ ಇದೆ ಎಂದರೆ ಸರಿ. ಸದರಿ ಹಳ್ಳ ಪಶ್ಚಿಮಕ್ಕೂ ಬಂದಿರುತ್ತದೆ ಎಂದರೆ ಪಶ್ಚಿಮ, ದಕ್ಷಿಣದಿಂದ ಪುರ್ವಕ್ಕೂ ಹೋಗಿರುತ್ತದೆ ಎಂದು ನುಡಿಯುತ್ತಾರೆ.

3. ಪ್ರತಿವಾದಿ ಪರ ವಕೀಲರು ಸಾಕ್ಷಿಗೆ ದಾಖಲೆಯನ್ನು ಎದುರು ತೋರಿಸಿ, ಅದು ಹಿರೇ ಸಂಗಾಪುರ ಗ್ರಾಮದ ಗ್ರಾಮ ನಕ್ಷೆ ಎಂದು ನುಡಿದಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಸದರಿ ಗ್ರಾಮ ನಕ್ಷೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಹಿರೇಸಂಗಾಪುರ ಗ್ರಾಮದ ದಕ್ಷಿಣಕ್ಕೆ ನಮ್ಮೂರು ಬರುತ್ತದೆ ಎಂದರೆ ಸರಿ. ಸರ್ವೇ ನಂಬರಃ 35, 40, 41, 47, 48, 49, 62, 63 ರ ಮೂಲಕ ಎಡಗೋಡಿನಿಂದ ರಾಣೇಬೆನ್ನೂರಿಗೆ ದಾರಿ ಇದೆ ಎಂದರೆ ಸಾಕ್ಷಿಯು ಕಾಲು ದಾರಿ ಇದೆ ಎಂದು ನುಡಿಯುತ್ತಾರೆ.

4. ಸದರಿ ದಾರಿ ಸರ್ವೇ 36 ಕ್ಕೆ ಹೊಂದಿರುವ ಹಳ್ಳದ ಮೂಲಕ ಹಾದು ಹೋಗುತ್ತದೆ ಎಂದರೆ ಸರಿ. ಸರ್ವೇ ನಂಬರಃ 35, 40, 41, 47, 48, 49, 62, 63 ರ ರೈತರು ನಮ್ಮೂರಿನಿಂದ ಸದರಿ ದಾರಿಯ ಮೂಲಕ ಹೋಗುತ್ತಾರೆ ಎಂದರೆ ಸಾಕ್ಷಿಯು ಹಳ್ಳ ಇರುವುದರಿಂದ ಹೋಗಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂಬರಃ 35 ಕಣಕಣ್ಣನವರ ಆಸ್ತಿ ಇರುತ್ತದೆ. ಸದರಿ ಸರ್ವೇ ನಂಬರಃ 35 ರಲ್ಲಿ ಸುಮಾರು 8-10 ಹಿಸ್ಸೆಗಳಿವೆ. ಸದರಿ ಕಣಕಣ್ಣನವರ ನಮ್ಮೂರಿನವರು. ಸರ್ವೇ ನಂಬರಃ 35 ರ ಇಬ್ಬರು ಮಾತ್ರ ಯಡಗೋಡದಿಂದ ಕಾಲು ದಾರಿಯಲ್ಲಿ ತಮ್ಮ ಜಮೀನಿಗೆ ಇಳಿಯುತ್ತಾರೆ. ಉಳಿದವರೆಲ್ಲ ಹಿರೇಸಂಗಾಪುರ ರಸ್ತೆಯಿಂದ ಬರುತ್ತಾರೆ.

5. ಸುಮಾರು 6 ತಿಂಗಳ ಹಿಂದೆ ಯಡಗೋಡದಿಂದ ರಾಣೇಬೆನ್ನೂರಿಗೆ ಹೋಗುವ ರಸ್ತೆ ರಿಪೇರಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನಕಾಶೆ ಪ್ರಕಾರ ರಸ್ತೆ ಮಾಡಿಲ್ಲ, ನಾವು ನಮ್ಮ ಜಮೀನಿಗೆ ರಸ್ತೆ ಮಾಡಿಕೊಂಡಿರುತ್ತೇವೆ. ಮಂಜಪ್ಪ ಹಾಗೂ ನಾವು ನಮ್ಮ ಜಮೀನಿಗೆ ರಸ್ತೆ ಮಾಡಿಸಿಕೊಂಡಿರುತ್ತೇವೆ. ಸದರಿ ಮಂಜಪ್ಪ ರವರ ಆಸ್ತಿ ಸರ್ವೇ ನಂಬರಃ 49 ಇರುತ್ತದೆ. ನಾನು ಮಾಡಿಸಿಕೊಂಡ ರಸ್ತೆಯಲ್ಲಿ ಓಡಾಡುತ್ತಿದ್ದೇವೆ. ಸಾಕ್ಷಿಯು ಮುಂದುವರೆದು ನಾವು ಎರಡೂ ರಸ್ತೆಗಳಲ್ಲಿ ಓಡಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾವು ರಸ್ತೆ ಮಾಡಿಸಿಕೊಂಡು ಸುಮಾರು 2 ತಿಂಗಳಾಗಿವೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ
ನ್ಯಾಯಪೀಠ ರಟ್ಟೀಹಳ್ಳಿ .